(SRI S. NIJALINGAPPA)

schemes—it is not possible to give at this stage because they are being worked out.

ಶ್ರೀ ಜೆ. ದೇವಯ್ಯ.—ಮೇಕೆದಾಟ್ ಹತ್ತಿರ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡ ಬೇಕೆಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಪರಾಂಬರಕೆ ಯಲ್ಲಿದೆ. ಯೋಜನೆ ಮಾಡುತ್ತಿದ್ದಾರೆ.

ಶ್ರೀ ಜೆ. ದೇವಯ್ಯ.—ಅಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಮುಂದುವರಿಸುವುದಕ್ಕೆ ಅವಕಾಶ ವಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅವಕಾಶವಿದೆ. ಯಾವಾಗ ಮುಂದುವರಿಸಬೇಕೆಂದು ಯೋಜನೆ ಯಲ್ಲಿದೆ.

Construction of Houses for Teachers in Villages.

*Q.—408. Sri S. V. RAME GOWDA (Malur).—

Will the Government be pleased to state :—

whether they have any scheme for constructing houses for teachers in villages and deducting rent from their salary ?

A.—Sri S. R. KANTHI (Minister for Education).—

No ; there is a scheme for the construction of residential quarters only for women teachers under the Third Five-Year Plan.

ಶ್ರೀ ಎಸ್. ವಿ. ರಾಮೇಗೌಡ.—ಉಪಾಧ್ಯಾಯನಿ ಯರಿಗೆ ಮಾತ್ರ ವಾಸದ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದೀರಿ. ಉಪಧ್ಯಾಯರುಗಳೇನು ಅನ್ಯಾಯ ಮಾಡಿದ್ದರು ?

†ಶ್ರೀ ಎಸ್. ಆರ್. ಕಂಠಿ.—ಅನ್ಯಾಯ ಮಾಡಿಲ್ಲ. ಸರ್ಕಾರದಲ್ಲಿ ದುಡ್ಡಿಲ್ಲ. ಆದ್ದರಿಂದ ಈಗಿನ ಪ್ಲಾನಿನಲ್ಲಿ ಹಾಕಿಲ್ಲ.

ಶ್ರೀ ಎಸ್. ವಿ. ರಾಮೇಗೌಡ.—ಉಪಾಧ್ಯಾಯರು ಗಳು ಹಳ್ಳಿಗಳಲ್ಲ ವಾಸವಾಗಿಲ್ಲದೆ ಬೇರೆ ಕಡೆ ವಾಸ ಮಾಡಿಕೊಂಡಿದ್ದು ಪ್ರೈಮರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ವನ್ನು ಸರಿಯಾಗಿ ನಡೆಸುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಕೆಲವು ಕಡೆ ಹಾಗಾಗಿರ ಬಹುದು. ಎಲ್ಲಾ ಕಡೆಯಲ್ಲೂ ಹಾಗಾಗಿಲ್ಲ.

ಶ್ರೀ ಎಸ್. ವಿ. ರಾಮೇಗೌಡ.—ಎಲ್ಲಾ ಕಡೆ ಯಲ್ಲೂ ಹಾಗಾಗುತ್ತಿದೆ.

(ಉತ್ತರವಿಲ್ಲ)

Sri G. V. GOWDA.—May I know the number of quarters proposed to be constructed for the teachers in the Third Plan ?

Sri S. R. KANTHI.—560 residential quarters for women teachers at a cost of Rs. 14 lakhs.

Sri B. R. SUNTHANKAR.—May I know how much work has been executed in the first year of the Third Plan ?

Sri S. R. KANTHI.—In 1962-63, Rs. 4 lakhs have been provided for completing the quarters sanctioned in the Second Plan.

Sri H. R. KESHAVAMURTHY.—Is there any type design for men and women teachers and, if so, what is the difference ?

ಶ್ರೀ ಎಸ್. ಆರ್. ಕಂಠಿ.—ಗಂಡನರ ಮನೆಗಳಿಗೆ ಟೈಪ್ ಡಿಸೈನ್ ಎಂಬುವ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ ಅವರಿಗೆ ಕಟ್ಟಿಸಿ ಕೊಡುವುದೇ ಇಲ್ಲ. ಹೆಣ್ಣುಮಕ್ಕಳಿಗೆ ಟೈಪ್ ಡಿಸೈನ್ ಇದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಂಥಿಂಥಾ ಸ್ಕೂಲು ಗಳಲ್ಲೇ ಉಪಾಧ್ಯಾಯರಿರುತ್ತಾರೆಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅವರಿಗೇ ಗೊತ್ತಿದೆ, ಎಲ್ಲರುತ್ತಾರೆ, ಎಲ್ಲರುವುದಿಲ್ಲ ಎಂಬುದು.

Sri S. RAJAGOPAL.—How many teachers are there in Bangarpet Taluk and how many houses are you going to construct for them ?

ಶ್ರೀ ಎಸ್. ಆರ್. ಕಂಠಿ.—ಬಂಗಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಕಟ್ಟಿಸುತ್ತಾರೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ತಾವು ಹೆಣ್ಣುಮಕ್ಕಳ ಮೇಲೆ ಹೆಚ್ಚು ಅಭಿಮಾನ ತೋರಿಸಿದ್ದೀರಿ. ಪ್ಲೇಸೂರು ನಂಸ್ಥಾನದಲ್ಲರತಕ್ಕ ಎಲ್ಲಾ ಉಪಾಧ್ಯಾಯ, ಮತ್ತು ಉಪಾಧ್ಯಾಯನಿಯರಿಗೂ ವಾಸದ ಸೌಕರ್ಯ ಕಲ್ಪಿಸಿ ಕೊಡಲು ಎಷ್ಟು ಬೇಕಾಗುತ್ತದೆಂಬುದನ್ನು ಯೋಜನೆ ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ನರ್ಕಾರದ ಮುಂದೆ ಬಂದಿಲ್ಲ. ಆದ್ದರಿಂದ ಯೋಜನೆ ಮಾಡಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರತಿ ಹಳ್ಳಿಯಲ್ಲಿಯೂ ಉಪಾಧ್ಯಾಯರಿಗೂ ವಾಸದ ಮನೆಗಳಿಗೆ ತೊಂದರೆ ಯಿರುವುದು ನರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದ್ದೇನೆ. ಉಪಾಧ್ಯಾಯರಿಗೂ ಹಾಗೂ ಉಪಾಧ್ಯಾಯನಿಯ ರಿಗೂ ತೊಂದರೆಯಿದೆಯೆಂಬುದು ಗೊತ್ತಿದೆ.

ಶ್ರೀ ಕುಂದೂರು ರುದ್ರಪ್ಪ.—ಈ ರೀತಿ ಮನೆ ಗಳನ್ನು ಬರೀ ಹಳ್ಳಿಗಳಲ್ಲೇ ಕಟ್ಟುತ್ತಿದ್ದೀರಾ ಅಥವಾ ತಾಲ್ಲೂಕುಗಳಲ್ಲೂ ಪಟ್ಟಣ ಗಳಲ್ಲೂ ಕಟ್ಟುತಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಎಲ್ಲಾ ಕಡೆಯಲ್ಲೂ ಕಟ್ಟುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಹಾಕಿರುವ ಡಿಸೈನ್ ಪ್ರಕಾರ ಏನೇನು accommodation ಇರುತ್ತದೆ ?

[No reply.]

† Indicates that the remarks or speeches have not been revised by the member concerned.

ಶ್ರೀ ಎಸ್. ಎಂ. ಗುರಡ್ಡಿ.—ಹಳ್ಳಿಗಾಡಿನ ಜನರು ಅವರ ವಂತಿಕೆಯಿಂದ ಏನಾದರೂ ಈ ಬಗ್ಗೆ ಹಣ ಕೊಡಬೇಕೇ ?

ಶ್ರೀ ಎಸ್. ಆರ್. ಕಂಠಿ.—ನೋಡಿ ಹೇಳುತ್ತೇನೆ.

ಶ್ರೀ ಎಸ್. ಎಂ. ಗುರಡ್ಡಿ.—ಉಪಾಧ್ಯಾಯರು ಗಳಿಗೆ ಹಳ್ಳಿಗಳಲ್ಲಿ ಮನೆಗಳಿಲ್ಲದೆ ಹೋದರೆ ಅವರು ಎಲ್ಲಿ ವಾಸಮಾಡಬೇಕು ?

ಶ್ರೀ ಎಸ್. ಆರ್. ಕಂಠಿ.—ಅದು ಅವರಿಗೆ ಗೊತ್ತಿದೆ. ಎಲ್ಲಾದರೂ ನೋಡಿಕೊಳ್ಳುತ್ತಾರೆ.

ಶ್ರೀ ಎಸ್. ಎಂ. ಗುರಡ್ಡಿ.—ಮನೆಗಳನ್ನು ಈ ರೀತಿ ಕಟ್ಟಿಸಿಕೊಡುವುದು ಬರೀ ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲೊ ಅಥವಾ ಎಲ್ಲಾ ಕಡೆಯಲ್ಲೂ ?

ಶ್ರೀ ಎಸ್. ಆರ್. ಕಂಠಿ.—ಎಲ್ಲಾ ಕಡೆಯಲ್ಲೂ ಕಟ್ಟುತ್ತಿದ್ದೇವೆ.

Sri ANNA RAO GANAMUKHI.—What is the rent the Government is charging to those lady teachers, if they occupy those houses ?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿ ತರಿಸಿ ಕೊಡುತ್ತೇನೆ.

ಶ್ರೀ ಜಿ. ಮರುಳಪ್ಪ.—560 ಮನೆಗಳನ್ನು ಕಟ್ಟಿಸುವುದಾಗಿ ಹೇಳಿದ್ದೀರಿ. ಇದರಿಂದ ಉಪಾಧ್ಯಾಯಿನಿಯರಿಗೆಲ್ಲಾ ಸಾಕಾಗುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಗೇನೂ ನಾನು ಹೇಳಲಿಲ್ಲ.

ಶ್ರೀ ಜಿ. ಮರುಳಪ್ಪ.—ಉಪಾಧ್ಯಾಯಿನಿಯರಿಗೆಲ್ಲ ಕೊಡಬೇಕಾದರೆ ಎಷ್ಟು ಮನೆಗಳು ಬೇಕು ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಉಪಾಧ್ಯಾಯಿನಿಯರುಗಳನ್ನು ಮೇಲೆಂದಮೇಲೆ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಮನೆಗಳನ್ನು ಯಾವ ರೀತಿ ಹಂಚುತ್ತೀರಿ ? ಡಿಸ್ಟ್ರಿಕ್ಟಿಗಿಷ್ಟು, ತಾಲ್ಲೂಕಿಗಿಷ್ಟು ಎಂತಲೇ ?

ಶ್ರೀ ಎಸ್. ಆರ್. ಕಂಠಿ.—ಡಿಸ್ಟ್ರಿಕ್ಟ್‌ವಾರು ಮತ್ತು ತಾಲ್ಲೂಕುವಾರು ಎಂದು ಕೊಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೈಸೂರು ರಾಜ್ಯದಲ್ಲಿ ಎಷ್ಟು ಜನ ಉಪಾಧ್ಯಾಯರುಗಳಿಗೆ ಮನೆಗಳು ಬೇಕೆಂದು ನರ್ವೆಮಾಡಿ, ಅದನ್ನು ಕಟ್ಟಿಸಿ ಕೊಡುವುದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಡಲಾಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ತಾಂಡಗಳಿರುತ್ತವೆ. ಅಲ್ಲಿ ವಸತಿ ಸೌಕರ್ಯವಿರುವುದಿಲ್ಲ. ಅಲ್ಲಿಗೂ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಶಿಕ್ಷಕಿಯರಿದ್ದರೆ ಕೊಡಲಾಗುತ್ತದೆ.

ಶ್ರೀ ಸಿ. ಎಸ್. ಹುಲ್‌ಕೋಟಿ.—ಅಧ್ಯಾಪಕಿಯರು ಎಂದರೆ, ಕಾಲೇಜು, ಹೈಸ್ಕೂಲು, ಪ್ರೈಮರಿ ಸ್ಕೂಲುಗಳಲ್ಲಿರುವವರಿಗೆಲ್ಲರಿಗೂ ಇದು ಅನ್ವಯಿಸುತ್ತದೆಯೇ?

ಶ್ರೀ ಎಸ್. ಆರ್. ಕಂಠಿ.—ಪ್ರೈಮರಿ ಪಾಠಶಾಲೆಗಳಿಗೆ ಮಾತ್ರ ಇದು ಅನ್ವಯಿಸುತ್ತದೆ.

Sri G. V. GOWDA.—Considering the number of women teachers to be employed in the Third Plan, is there no provision made ?

Sri S. R. KANTHI.—It is hypothetical.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವೀಗ ಅಧ್ಯಾಪಕಿಯರಿಗೆ ಮನೆ ಕಟ್ಟಬೇಕೆಂದು ಹೊರಟಿದ್ದೀರಿ. ಆದರೆ ಮನೆಗಳನ್ನು ಕಟ್ಟಿಸುವ ಹೊತ್ತಿಗೆ ಆ ಅಧ್ಯಾಪಕಿಯರು ವರ್ಗವಾಗಿ ಬಿಟ್ಟರೆ ಏನು ಮಾಡುತ್ತೀರಿ? ಮತ್ತೆ ಅವರನ್ನು ಆಲ್ಲಿಗೆ ಟ್ರಾನ್ಸ್‌ಫರ್ ಮಾಡಿ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಮತ್ತೊಬ್ಬರು ಅಧ್ಯಾಪಕಿಯರು ಅಲ್ಲಿಗೆ ಬಂದಿರುತ್ತಾರೆ.

ಶ್ರೀ ಟಿ. ಮಾದಯ್ಯಗೌಡ.—ಪ್ಲಾನಿನಲ್ಲಿ ಮೊದಲನೆಯ ವರ್ಷದಲ್ಲಿ ಈ ಬಗ್ಗೆ ಎಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—1961-62ರಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಹಾಕಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶಿಕ್ಷಕಿಯರು ಎಷ್ಟು ಜನರಿದ್ದಾರೆ, ಅವರಿಗೆಲ್ಲಾ ಮನೆಗಳನ್ನು ಕಟ್ಟಿಸಿ ಕೊಡಬೇಕಾದರೆ ಎಷ್ಟು ಹಣ ಬೇಕು, ಎಷ್ಟು ಕಾಲ ಹಿಡಿಯುತ್ತದೆ ಎಂಬುದನ್ನು ತನಿಖೆ ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಅದರ ಬಗ್ಗೆ ಮಾಹಿತಿ ತರಿಸಿ ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಮನೆಗೆ ಅಂದಾಜು ಮಾಡಿರುವ ಹಣವೆಷ್ಟು ?

(ಉತ್ತರವಿಲ್ಲ)

Layouts formed by the Bangalore City Improvement Trust Board from its inception.

*Q.—420. **Sri K. V. BYRE GOWDA** (Yeshvanthapur).—

Will the Government be pleased to state :—

(*a*) the number of layouts formed by the Bangalore City Improvement Trust Board from its inception up-to-date ;

(*b*) the expenses incurred in respect of each layout and the amounts realised by the sale of the sites formed therein ;

(*c*) the number of layouts completed and handed over to the Corporation ;

(*d*) the number of private layouts for which no objection certificates have been given, the names of the persons to whom the certificates have been granted and the areas for which they have been granted ;

(*e*) the policy of the Government in the formation of the layouts by the City Improvement Trust Board and private agencies ;

(*f*) whether there is a 'Master Plan' or 'Master Scheme' for the expansion of the City of Bangalore ?